ಇ) ಅನರ್ಹ ಪಡಿತರ ಚೀಟಿಗಳನ್ನು ಹಾಗೂ ಪಡಿತರ ಚೀಟಿ ಇಲ್ಲದೆ ಇರುವ ಕುಟುಂಬಗಳನ್ನು ಗುರುತಿಸುವ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ. ಈ ಪ್ರಕ್ರಿಯೆ ಶೀಘ್ರದಲ್ಲಿ ಮುಗಿಯಲಿದೆ. ನಂತರ ತಕ್ಷಣ ಹೊಸ ಪಡಿತರ ಚೀಟಿ ನೀಡಲಾಗುವುದು.

ಸಿಂಧನೂರು ತಾಲ್ಲೂಕಿನಲ್ಲಿ 110 ಕೆ.ವಿ. ಹಾಗೂ 77 ಕೆ.ವಿ. ಸ್ಟೇಷನ್‌ಗಳು

198 (405) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧನೂರು ತಾಲ್ಲೂಕಿನಲ್ಲಿ ಪ್ರಾರಂಭವಾಗಿರುವ 110 ಕೆ.ವಿ. ಹಾಗೂ 33 ಕೆ.ವಿ. ಸ್ಟೇಷನ್‌ಗಳ ಸಂಖ್ಯೆ ಎಷ್ಟು ಮತ್ತು ಯಾವುವು; (ಪೂರ್ಣ ವಿವರಗಳನ್ನು ನೀಡುವುದು)

ಆ) ಸರ್ಕಾರದಿಂದ ಮಂಜೂರಾತಿ ಪಡೆದ ಇನ್ನೂ ಪ್ರಾರಂಭವಾಗದೇ ಇರುವ ಸಬ್ ಸ್ಟೇಷನ್‌ಗಳ ಸಂಖ್ಯೆ ಎಷ್ಟು ಮತ್ತು ಅವು ಯಾವುವು; (ಪೂರ್ಣ ವಿವರಗಳನ್ನು ಒದಗಿಸುವುದು)

ಇ) ಈ ಸಬ್ ಸ್ಟೇಷನ್‌ಗಳು ಪ್ರಾರಂಭವಾಗದೆ ಇರಲು ಕಾರಣಗಳೇನು;

ಈ) ಈ ಸಬ್ ಸ್ಟೇಷನ್‌ಗಳು ಸಕಾಲದಲ್ಲಿ ಪ್ರಾರಂಭವಾಗದಿರುವುದರಿಂದ ಸ್ಥಳೀಯ ರೈತರಿಗೆ ಹಾಗೂ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಈ ಸಬ್ ಸ್ಟೇಷನ್‌ಗಳನ್ನು ಪ್ರಾರಂಭಿಸಲು ಸರ್ಕಾರ ತುರ್ತಾಗಿ ಕ್ರಮ ಕೈಗೊಳ್ಳುವುದೇ?

ಕು॥ ಶೋಭಾ ಕರಂದ್ಲಾಜೆ (ಇಂಧನ ಸಚಿವರು):

ಅ) ಸಿಂಧನೂರು ತಾಲ್ಲೂಕಿನಲ್ಲಿ ಕೆ.ಪಿ.ಟಿ.ಸಿ.ಎಲ್. ಹಾಗೂ ಜೆಸ್ಕಾಂ ವತಿಯಿಂದ ನಿರ್ಮಾಣವಾಗಿ ಹಾಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯುತ್ ಸಬ್ ಸ್ಟೇಷನ್ನುಗಳ ವಿವರಗಳು ಈ ಕೆಳಕಂಡಂತಿವೆ:

ಕ್ರಮ ಸಂಖ್ಯೆ	ವೋಲ್ಟೇಜ್	ಸಂಖ್ಯೆ	ಕಾರ್ಯನಿರ್ವಹಿಸುತ್ತಿರುವ ಸ್ಥಳ
1	220 ಕೆ.ವಿ.	1	1. ಸಿಂಧನೂರು
2	110 ಕೆ.ವಿ.	3	1. ಮುಕುಂದ 2. ಸಿಂಧನೂರು 3. ವಲ್ಕಂದಿನ್ನಿ

ಕ್ರಮ ಸಂಖ್ಯೆ	ವೋಲ್ಟೇಜ್	ಸಂಖ್ಯೆ	ಕಾರ್ಯನಿರ್ವಹಿಸುತ್ತಿರುವ ಸ್ಥಳ
3	33 ಕೆ.ವಿ.	5	1. ವಳಬಳ್ಳಾರಿ 2. ದಡೆಸುಗೂರು 3. ತುರುವಿನಾಳ 4. ಗೊರೆಬಾಳ 5. ಕುರಕುಂದಾ

ಆ, ಇ, ಈ, ಮತ್ತು ಉ) ಸರ್ಕಾರದಿಂದ ಮಂಜೂರಾತಿ ಪಡೆದು ಇನ್ನೂ ಪ್ರಾರಂಭವಾಗದೆ ಇರುವ ಸಬ್ ಸ್ಟೇಷನ್ನುಗಳ ಸಂಖ್ಯೆ 8. ಅವುಗಳ ವಿವರ ಈ ಕೆಳಕಂಡಂತಿವೆ:

1. 110/11 ಕೆ.ವಿ. ಸಬ್ ಸ್ಟೇಷನ್ ದಢೇಸುಗೂರು (ಕಾಮಗಾರಿ ಪ್ರಗತಿಯಲ್ಲಿದ್ದು, ಮಾರ್ಚ್–2011ರ ಅಂತ್ಯದೊಳಗೆ ಚಾಲನೆಗೊಳಿಸಲು ಕವಿಪ್ರನಿನಿ ಗುರಿಯನ್ನು ಹೊಂದಿದೆ)
2. 110/33/11 ಕೆ.ವಿ. ಸಬ್ ಸ್ಟೇಷನ್, ತುರಿವಿಹಾಳ್ (ಕಾಮಗಾರಿ ಪ್ರಗತಿಯಲ್ಲಿದೆ).
3. 33 ಕೆ.ವಿ. ಸಬ್ ಸ್ಟೇಷನ್ ಬಳಗನೂರು (ಕಾಮಗಾರಿ ಪ್ರಗತಿಯಲ್ಲಿದೆ).
4. 33 ಕೆ.ವಿ. ಸಬ್ ಸ್ಟೇಷನ್ ಗೋನ್‌ವಾರ (ಕಾಮಗಾರಿ ಪ್ರಗತಿಯಲ್ಲಿದೆ)
5. 33 ಕೆ.ವಿ. ಸಬ್ ಸ್ಟೇಷನ್, ಜವಳಗೇರಾ (ಜಮೀನು ಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ)
6. 33 ಕೆ.ವಿ. ಸಬ್ ಸ್ಟೇಷನ್, ಮಲ್ಕಾಪುರ (ಜಮೀನು ಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ)
7. 33 ಕೆ.ವಿ. ಸಬ್ ಸ್ಟೇಷನ್, ಹರ್ವಿ (ಜಮೀನು ಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ)
8. 33 ಕೆ.ವಿ. ಸಬ್ ಸ್ಟೇಷನ್, ಗಾಂಧಿನಗರ (ಜಮೀನು ಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ)